ಈಗ ಮಾನ್ಯ ವೆಂಕಟರಾಮಯ್ಯನವರು ಈ ವರ್ಷ ಭಾರಿ ಅಥವಾ ಸಣ್ಣ ನೀರಾವರಿ ಬಗ್ಗೆ ಸರ್ಕಾರ ಖರ್ಚು ಮಾಡಿದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆದರೆ ಮಾನ್ಯ ಬೊಮ್ಮಾಯಿಯವರು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟ ಪ್ರಕಾರ ಏಪ್ರಿಲ್‌ನಿಂದ ಇವತ್ತಿನವರೆಗೆ ಬರಗಾಲ ಪರಿಸ್ಥಿತಿಗೆ ಬಿಡುಗಡೆ ಮಾಡಿದ ಒಟ್ಟು ಹಣ ಏಳೂವರೆ ಕೋಟಿ ರೂಪಾಯಿಗಳು ಎಂದು ಒಂದು ಕಡೆ ಪತ್ರಿಕೆಯಲ್ಲಿ ಬಂದಿದೆ ಅದೂ ಕೂಡ ಯೋಜನೆಗೆ ಅನ್ವಯಿಸುವ ಹಣ ಅಲ್ಲ, ಮಾರ್ಜಿನ್ ಮನಿ ಬರಗಾಲಕ್ಕೆ ಮಾತ್ರ ೭ ಕೋಟಿ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ ಮೇಲೆ ನೀರಾವರಿ ಮತ್ತು ಯೋಜನೆಗೆ ಇಷ್ಟಂಥ ಹಣದಿಂದ ತೆಗೆದು ಬಿಡುಗಡೆ ಮಾಡಿದ್ದಲ್ಲ. ಆದ್ದರಿಂದ ರಾಜ್ಯ ಸರ್ಕಾರ ಇವತ್ತಿನವರೆಗೆ ಬರಗಾಲದ ಬಗ್ಗೆ ವಿಶೇಷವಾದಂಥ ಖರ್ಚು ಒಂದು ನಯೇ ಪೈಸೆ ಕೂಡ ಮಾಡಿಲ್ಲ, ಇದಕ್ಕಾಗಿ ಯೋಜನೆಯಿಂದ ತೆಗೆದುಕೊಳ್ಳುತಕ್ಕ ಪ್ರಶ್ನೆಯಿಲ್ಲ. ಆದ್ದರಿಂದ ಈ ಉತ್ತರ ಕೆ ಇಷ್ಟಂಥ ತಪ್ಪಿ ಸರ್ಕಾರದ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಬರಗಾಲದ ಕಾರಣ ಯೋಜನಾ ವೆಚ್ಚವನ್ನು ತಡೆಹಿಡಿಯಂಥ ಉದ್ದೇಶವೇನು ? ಅದನ್ನು ತಾವು ದಯವಾಡಿ ಹೇಳಬೇಕಂ..

ಶ್ರೀ ರಾಮಕೃಷ್ಣ ಹೆಗಡೆ.—ಜೂಲೈ ತಿಂಗಳಲ್ಲಿ ೮ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಆಗಸ್ಟ್ ತಿಂಗಳಲ್ಲಿ ಪುನಃ ೮ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನನ್ನ ಉತ್ತರವನ್ನು ಅವರು ಸರಿಯಾಗಿ ಕೇಳಿಸಿಕೆ ಂಡ ಹಾಗೆ ಕಾಣಿಸುತ್ತಾ ಇಲ್ಲ. ಈ ವರ್ಷದ ಪರಿಸ್ಥಿತಿಯಿಂದ ಹಣಕಾಸಿನ ಬಿಕ್ಕಟ್ಟಾಗಿದೆ ಎಂದು ಹೇಳಲಿಲ್ಲ ಅಥವಾ ಬರಗಾಲಕ್ಕಾಗಿ ಬಹಳ ಖರ್ಚು ಮಾಡಿದ್ದೇವೆ, ಅದಕ್ಕಾಗಿ ಹಣಕಾಸಿನ ಬಿಕ್ಕಟ್ಟಾಗಿದೆ ಎಂದು ಹೇಳಲಿಲ್ಲ. ೪ ವರ್ಷಗಳಿಂದ ಬರಗಾಲ ಬಂದು ನಾವು ೬೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಪ್ರಸಂಗ ಬಂದಿತ್ತು ಆದರ ಒಟ್ಟಾರೆ ಕ್ಯುಮುಲೇಟೀವ್ ಎಫೆಕ್ಟ್ ಈ ವರ್ಷದಿಂದ ಪ್ರಾರಂಭವಾಗಿದೆ. ಆದ್ದರಿಂದ ನಾವು ಸ್ವಲ್ಪ ಬಿಕ್ಕಟ್ಟಿನಲ್ಲಿ ಎದುರಿಸುತ್ತಾ ಇದ್ದೇವೆ. ಇದು ಇವತ್ತಿನದಲ್ಲ ಅಥವಾ ನಿನ್ನೆಯದಲ್ಲ, ೪ ವರ್ಷಗಳಿಂದ ಬಂದದ್ದು, ಅವರ ಕಾಲದಿಂದ ಬಂದದ್ದು.

ಮಂಗಳೂರಿನ ಹ್ಯಾಮಿಲ್‌ಟನ್ ವೃತ್ತಕ್ಕೆ ಕಾಂಕ್ರೀಟ್ ಹಾಕುವ ಬಗ್ಗೆ.

೧೩೧. ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರಿನಲ್ಲಿ ಲೋಕೋಪಯೋಗಿ ರಸ್ತೆಯ ಮೇಲೆ ಬರುವ ಹ್ಯಾಮಿಲ್‌ಟನ್ ಮತ್ತು ಲೇಡಿಹಿಲ್ ವೃತ್ತಗಳಿಗೆ ಕಾಂಕ್ರೀಟ್ ಹಾಕಲಂ ಅಂದಾಜಂ ಪಟ್ಟಿಗಳನ್ನು ತಯಾರಿಸಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ ಅಂದಾಜು ಪಟ್ಟಿಗಳಿಗೆ ಯಾವಾಗ ಮಂಜೂರಾತಿಯಂನ್ನು ನೀಡಲಾಗಂವುದು ಹಾಗೂ ಯಾವಾಗ ಕೆಲಸವನ್ನು ಪ್ರಾರಂಭಿಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ಮಂಗಳೂರಿನ ಹ್ಯಾಮಿಲ್‌ಟನ್ ವೃತ್ತಕ್ಕೆ ಕಾಂಕ್ರೀಟ್ ಹಾಕುವ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಆದರೆ ಲೇಡಿಹಿಲ್ ವೃತ್ತಕ್ಕೆ ಕಾಂಕ್ರೀಟ್ ಹಾಕುವ ಅಂದಾಜು ಪಟ್ಟಿಯನ್ನು ತಯಾರಿಸಿಲ್ಲ.

ಆ) ಈ ಕೆಲಸಗಳು ೮೭-೮೮ನೇ ಸಾಲಿನ ಆಯವ್ಯಯದಲ್ಲಿ ಸೇರಿಲ್ಲ. ಆರ್ಥಿಕ ಲಭ್ಯತೆಗನಂ ಗುಣವಾಗಿ ಈ ಕೆಲಸಗಳನ್ನು ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ —ಹ್ಯಾಮಿಲ್ಟನ್ ಸರ್ಕಲ್‌ಗೆ ಎಷ್ಟು ಎಸ್ಟಿಮೇಟಾಗಿದೆ, ಮತ್ತು ಲೇಡಿಹಿಲ್ ಸರ್ಕಲ್‌ಗೆ ಈ ವರ್ಷ ಎಸ್ಟಿಮೇಟ್ ಮಾಡಲಿಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಒಂದಂ ವೃತ್ತಕ್ಕೆ ಕಾಂಕ್ರೀಟ್ ಹಾಕಲಿಕ್ಕೆ ೪.೭೭ ಲಕ್ಷ ರೂಪಾಯಿಗಳು. ಇನ್ನೊಂದು ವೃತ್ತಕ್ಕೆ ಎಸ್ಟಿಮೇಟ್ ತಯಾರು ಮಾಡಿಲ್ಲ ಎಂದು ಹೇಳಿದ್ದೇನೆ.

ಶ್ರೀ ಬ್ಲೆಸೀಯಸ್ ಎಂ. ಡಿಸೋಜ.—ಈ ವರ್ಷ ಹ್ಯಾಮಿಲ್ಟನ್ ಸರ್ಕಲನ್ನು ಮಾಡಲಿಕ್ಕೆ ಆದೇಶ ಕೊಡುತ್ತೀರಾ ? ಇಲ್ಲದಿದ್ದರೆ ಬರುವ ವರ್ಷ ಬಜೆಟ್‌ನಿಂದ ಹಣ ಬಿಡುಗಡೆ ಮಾಡುತ್ತೇವೆ. ಎಂದು ಭರವಸೆ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಹಣಕಾಸಿನ ಪರಿಸ್ಥಿತಿ ಉತ್ತಮವಾದರೆ ಮಾಡಬಹುದು.

ಮಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ.

೨೬೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಉಚ್ಚ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಆದರ ಪ್ರಾರಂಭವಾದುದಿನಿಂದ ೧೯೮೭ ನೇ ಮಾರ್ಚಿವರೆಗೆ ಸರ್ಕಾರದವರು ಮಾಡಿದ ವೆಚ್ಚ ವೆಷ್ಟು, ಹಾಗೂ ಇನ್ನು ಮಂದೆ ಮಾಡಲಿರುವ ವೆಚ್ಚದ ಯೋಜನೆಯೇನು ?

ಆ) ಈ ವಿಶ್ವ ವಿದ್ಯಾನಿಲಯಕ್ಕೆ ವಿಶ್ವ ವಿದ್ಯಾನಿಲಯಧನಸಹಾಯದ ಆಯೋಗದವರ ಅನುದಾನ ಸಿಕ್ಕಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದನ್ನು ಎಂದು ಪಡೆದುಕೊಳ್ಳಲಾಗುವುದು ?

ಶ್ರೀ ಜೀವರಾಜ ಆಳ್ವ (ಉಚ್ಚ ಶಿಕ್ಷಣ ಮಂತ್ರಿಗಳು).—

ಅ) ಪ್ರಾರಂಭದಿಂದ ೧೯೮೭ ಮಾರ್ಚಿ ಕೊನೆಯವರೆಗೆ ರೂ. ೧೦,೩೦,೯೩,೧೫೮-೦೦ ವೆಚ್ಚವಾಗಿದೆ, ಹಾಗೂ ರೂ. ೨,೮೦,೪೫,೮೦೦-೦೦ ಖರ್ಚು ಮಾಡುವ ಯೋಜನೆಯಿದೆ.

ಆ) ಸಿಕ್ಕಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಂ. ಇದ್ದಿನಬ್ಬ.—ನನಗೆ ಉತ್ತರದ ಪಟ್ಟಿ ಇನ್ನೂ ಬರಲಿಲ್ಲ. ಈವರೆಗೆ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಆದ ವೆಚ್ಚದ ಕಾರ್ಯಗಳು ಸಮರ್ಪವಾಗಿ ನಡೆದಿವೆಯೇ ?

ಶ್ರೀ ಜೀವರಾಜ ಆಳ್ವ.—ಸಮರ್ಪಕವಾಗಿದೆ.

ಶ್ರೀ ಬಿ. ಎಂ. ಇದ್ದಿನಬ್ಬ.—ಇನ್ನು ಮುಂದಿನ ಯೋಜನೆಯ ಕೆಲಸಗಳು ಎಂದು ಪ್ರಾರಂಭವಾಗುತ್ತದೆ ಎಂತ್ತು ಯಾವುದಾದರೂ ಕೇಳಿಕೆಗಳು ಅಲ್ಲಿಂದ ಬಂದಿವೆಯೇ ?

ಶ್ರೀ ಜೀವರಾಜ ಆಳ್ವ.—೧೯೮೭-೮೮ರಲ್ಲಿ ೨ ಕೋಟಿ ೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಯೋಜನೆ ಮಾಡಿದ್ದೇವೆ. ಆದರೂ ಕೂಡ ಯು. ಜಿ. ಸಿ. ಯಿಂದ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೧ ಕೋಟಿ ೧೦ ಲಕ್ಷ ರೂಪಾಯಿಂಗಳು ಮಂಜೂರಾಗಿತ್ತು. ಆದರೆ ಬರೀ ೩೦ ಲಕ್ಷ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ. ಇನ್ನೂ ಯು. ಜಿ. ಸಿ. ಯಿಂದ ಹಣ ಬರುವುದಿದೆ, ಬಂದರೆ ನಾವು ಯೋಜನೆಗಳನ್ನು ಏನು ಮಾಡಿದ್ದೇವೆ ಅದನ್ನೆಲ್ಲಾ ಪೂರ್ಣಗೊಳಿಸಲಿಕ್ಕೆ ಸಹಾಯವಾಗುತ್ತದೆ.

ಶ್ರೀ ಬಿ. ಎಂ. ಇದ್ದಿನಬ್ಬ,—ಮಾನ್ಯ ಅಧ್ಯಕ್ಷರೆ, ಇದುವರೆಗೂ ೧೦ ಕೋಟಿ ರೂಪಾಯಿಂಗಳು ಖರ್ಚಾಗಿದ್ದರೂ ಇನ್ನು ಅನೇಕ ಕಟ್ಟಡಗಳು ಅರ್ಧಂಭರ್ದವಾಗಿಯೇ ಉಳಿದಿವೆ. ಏತಕ್ಕೆ ಸಂಪೂರ್ಣವಾಗಿಲ್ಲ ಎನ್ನುವ ಸಂಶಯ ನನಗಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಹಣಕಾಸಿನ ಕೊರತೆಯಿಂದ ಕಟ್ಟಡಗಳ ಕೆಲಸ ಮುಕ್ತಾಯವಾಗಿಲ್ಲ. ಈಗ ನಿಯೋಜಿಸಿರುವ ಎರಡು ಕೋಟಿ ರೂಪಾಯಿಗಳಲ್ಲಿ ವಿಶ್ವ ವಿದ್ಯಾನಿಲಯದ ಮೊದಲನೆಯ ಹಂತದ ಕೆಲಸ ಹಾಗೂ ಇತರ ಕಟ್ಟಡಗಳ ಕೆಲಸ ಮುಕ್ತಾಯವಾಗುತ್ತದೆ.